ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡಿರುವ ಅನುದಾನ

392(661); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ಅರಣ್ಯ ಇಲಾಖೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಎಷ್ಟು ಅನುದಾನವನ್ನು ನೀಡಿದೆ;

ಆ) ಹಾಗಿದ್ದಲ್ಲಿ, ಈ ಅವಧಿಯಲ್ಲಿ ಪ್ರತಿ ಜಿಲ್ಲೆಗೆ ವೆಚ್ಚ ಮಾಡಲಾಗಿರುವ ರಾಜ್ಯ ಮತ್ತು ಕೇಂದ್ರದ ಅನುದಾನವೆಷ್ಟು;

ಇ) ಈ ಅನುದಾನದಿಂದ ಇಲಾಖೆಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು (ಪ್ರತಿ ಜಿಲ್ಲೆಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಒದಗಿಸುವುದು)?

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) 2013–14ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡಿರುವ ಅನುದಾನದ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವಲಯ	ಬಿಡುಗಡೆಯಾದ ಅನುದಾನ (₹ ಲಕ್ಷಗಳಲ್ಲಿ)
1	ಜಿಲ್ಲಾವಲಯ	2,447.68
2	ರಾಜ್ಯ ವಲಯ	24,334.41
3	ಬಾಹ್ಯ ನೆರವಿನ ಯೋಜನೆ	2,127.88
	ಒಟ್ಟು	**28,909.97**
4	ಕೇಂದ್ರ ವಲಯ	336.00
5	ಕೇಂದ್ರ ಪುರಸ್ಕೃತ	– 3,748.97
	ಒಟ್ಟು	**4,084.97**
	ಒಟ್ಟು ಮೊತ್ತ	**32,994.94**

ಆ) ಮತ್ತು ಇ) ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯ ಮತ್ತು ಕೇಂದ್ರ ನೀಡಿದ ಅನುದಾನದಲ್ಲಿ ಮಾಡಲಾಗಿರುವ ಜಿಲ್ಲಾವಾರು ವೆಚ್ಚದ ವಿವರ ಹಾಗೂ ಕೈಗೊಂಡಿರುವ ಜಿಲ್ಲಾವಾರು ಅಭಿವೃದ್ಧಿ ಕಾರ್ಯಗಳ ವಿವರಗಳನ್ನು **ಅನುಬಂಧ–1**ರಲ್ಲಿ ನೀಡಿದೆ.